ಪಿಡಬ್ಲ್ಯೂಃ 1

ಇಂದು ದಿನಾಂಕಃ 03.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ಯು ಬಿ ಜೆ ವಕೀಲರಿಂದಃ

ನಾನು ಕಳೆದ ಬಾರಿ ಹಾಜರಪಡಿಸುತ್ತೇನೆ ಎಂದು ಹೇಳಿರುವ ಕರಾರು ಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ಖರೀದಿ ಕರಾರು ಪತ್ರದಲ್ಲಿ 37 ಗುಂಟೆ ಜಮೀನನ್ನು ಪ್ರತಿವಾದಿ 7 ರವರಿಗೆ ಮಾರಾಟ ಮಾಡಿದ್ದೇವೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಜೆ.ಬಿ.ಮಾಳಗನಕೊಪ್ಪ ಎಂದರೆ ನಾನೇ ಆಗಿರುತ್ತೇನೆ. ಸಾಕ್ಷಿಗೆ 2005 ರಲ್ಲಿ ಕರಾರು ಪತ್ರದ ನಕಲು ಪ್ರತಿಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿ ಇದೆ ಎಂದರೆ ಸಾಕ್ಷಿಯು ಇಲ್ಲ ಎಂದು ಅಲ್ಲಗಳೆದಿರುತ್ತಾರೆ. ಸಾಕ್ಷಿಗೆ ವಾದಿ ಪರ ವಕೀಲರು ಸಲ್ಲಿಸಿದ ವಕಾಲತ್ ನಾಮಾವನ್ನು ತೋರಿಸಿ ತನ್ನ ಸಹಿಯನ್ನು ತೋರಿಸಿ ಎಂದು ಕೇಳಿದ್ದು ಸಾಕ್ಷಿಯು ವಕಾಲತ್ ನಾಮವನ್ನು ನೋಡಿಕೊಂಡು ಮೌನವಾಗಿ ನಿಂತಿರುತ್ತಾರೆ. ನಂತರ ವಕಾಲತ್ ನಲ್ಲಿ ಇರುವ ಕ್ರಮ ಸಂಖ್ಯೆ 2 ಸಹಿ ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ,. ಸದರಿ ಕರಾರು ಪತ್ರದಲ್ಲಿರುವ ಸಹಿ ಹಾಗೂ ವಕಾಲತ್ ನಲ್ಲಿರುವ ಸಹಿ ಎರಡೂ ಒಂದೇ ಆಗಿರುತ್ತದೆ ಎಂದರೆ ಸಾಕ್ಷಿಯು ಕರಾರಿನಲ್ಲಿರುವ ಸಹಿ ನಾನು ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

2. ದಾವಾ ಶೆಡ್ಯೂಲ್-4 ನೇ ಆಸ್ತಿಯನ್ನು 7 ನೇ ಪ್ರತಿವಾದಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯೇ ದಾವಾ ಸಂಖ್ಯೆ 4 ರಲ್ಲಿ ಸ್ವಾದೀನದಲ್ಲಿ ಇದ್ದರೂ ಕೂಡ ನನ್ನ ತಂದೆ ಯಾವುದೇ ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ ಹಾಗೂ 2005 ರಲ್ಲಿ ನಮ್ಮ ಕುಟುಂಬದಲ್ಲಿ ಆದ ವಾಟ್ನಿ ಪತ್ರ ಆಗಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.